# ಹಸಿವಿನ ಮಹಾತ್ಮೆ

■ ಹರವೆ ಸಂಗಣ್ಣ ಪ್ರಕಾಶ್

ರಾಜ್ಯವೊಂದರ ರಾಜ ಪ್ರಜೆಗಳ ಕಷ್ಟ ಸುಖಕ್ಕೆ ಸ್ಪಂದಿಸುತ್ತ ಸುಖವಾಗಿ ರಾಜ್ಯವನ್ನು ಆಳುತ್ತಿದ್ದ. ಹೀಗೆ ಹಲವು ದಿನಗಳ ನಂತರ ತನ್ನ ಸೇನಾ ಪರಿವಾರದೊಂದಿಗೆ ಬೇಟೆಗಾಗಿ ಒಂದು ಕಾಡಿಗೆ ಹೋಗುತ್ತಾನೆ. ಹೀಗೆ ಹೋಗುತ್ತಾ ಹೋಗುತ್ತಾ ಕಾಡಿನ ಮಧ್ಯ ಭಾಗಕ್ಕೆ ಹೊರಟು ಹೋಗುತ್ತಾರೆ. ಅದೊಂದು ದುರ್ಗಮವಾದ ದಟ್ಟವಾದ ಅರಣ್ಯ ಅಲ್ಲಿ ಅನೇಕ ಕಾಡು ಮೃಗಗಳು ಕೂಗುತ್ತಾ ಇರುತ್ತವೆ. ಹೀಗೆ ರಾಜ ತನ್ನೊಂದಿಗೆ ಬಂದಿದ್ದ ಪರಿವಾರವನ್ನು ಬಿಟ್ಟು ಕಾಡಿನ ಮಧ್ಯೆ ತಪ್ಪಿಸಿಕೊಳ್ಳುತ್ತಾನೆ. ಇತ್ತ ರಾಜನ ಸೈನಿಕರು ತಪ್ಪಿಸಿಕೊಂಡ ತಮ್ಮ ರಾಜನನ್ನು ಕಾಡಿನ ವಿವಿಧ ದಿಕ್ಕಿನಲ್ಲಿ ಹುಡುಕಲು ಪ್ರಾರಂಭ ಮಾಡುತ್ತಾರೆ. ರಾಜನ ಸುಳಿವು ಸಿಗುವುದಿಲ್ಲ.

ದಿಕ್ಕಿಲ್ಲದೆ ಅವರೆಲ್ಲರೂ ವಾಪಸ್ ಅರಮನೆಗೆ ಬಂದು ಬಿಡುತ್ತಾರೆ. ಅತ್ತ ರಾಜ ತಪ್ಪಿಸಿಕೊಂಡು ಕಾಡಿನಲ್ಲಿ ಅಲೆಯುತ್ತಾ, ಚಿಂತಾಕ್ರಾಂತನಾಗಿ ಸುಸ್ತಾಗಿ ಒಂದು ಕಡೆ ಕುಳಿತುಕೊಳ್ಳುತ್ತಾನೆ. ಆಗ ಅವನಿಗೆ ಹೊಟ್ಟೆ ಹಸಿಯಲು ಪ್ರಾರಂಭ ಆಗುತ್ತದೆ. ಸುತ್ತಲೂ ನೋಡುತ್ತಾನೆ. ಅಲ್ಲಿ ಯಾರೂ ಕಾಣುವುದಿಲ್ಲ. ಆಗ ರಾಜ ಭಯದಿಂದ ಸ್ವಲ್ಪ ದೂರ ಹೋಗುತ್ತಾನೆ. ಅಲ್ಲಿ ಒಂದು ಸಣ್ಣ ಗುಡಿಸಲು ಕಾಣುತ್ತದೆ. ಮೇಲಿಂದ ಹೊಗೆ ಹೋಗುತ್ತಿರುವ ದೃಶ್ಯ ಕಾಣುತ್ತದೆ. ರಾಜನು ಜೋರಾಗಿ ಹೆಜ್ಜೆ ಇಡುತ್ತಾ ಅಲ್ಲಿಗೆ ಹೋಗುತ್ತಾನೆ. ಅಲ್ಲಿ ವಯಸ್ಸಾದ ಅಜ್ಜಿ ಅಡುಗೆ ಮಾಡುತ್ತ ಇರುತ್ತಾರೆ. ಆಗ ರಾಜ ಅಜ್ಜಿಗೆ ನಮಸ್ಕಾರ ಮಾಡಿ ತನ್ನೆಲ್ಲಾ ಕಷ್ಟ ಹೇಳಿಕೊಳ್ಳುತ್ತಾನೆ. ಆಗ ಅಜ್ಜಿ ನೋಡಪ್ಪಾ ಮಹಾರಾಜ ಹಸಿದವರಿಗೆ ಅನ್ನ ಕೊಡುವುದು ಧರ್ಮ. ಆದರೆ ನಾನು ಈಗ ಕೇವಲ ಕಾಡಿನಲ್ಲಿ ಸಿಗುವ ವಿವಿಧ ಸೊಪ್ಪುಗಳನ್ನು ಮಾತ್ರ ಬೇಯಿಸಿ ಕೊಡಬಹುದು. ನೀವು ಅದನ್ನು ಇಷ್ಟ ಪಡುವಿರಾ? ಎಂದು ಕೇಳುತ್ತಾಳೆ. ಅದಕ್ಕೆ ರಾಜ ದಯವಿಟ್ಟು ಅದನ್ನೇ ಕೊಡಿ ಎಂದು ಕೇಳಿಕೊಂಡಾಗ ಅಜ್ಜಿ ಕೊಡುತ್ತಾಳೆ. ರಾಜ ಅದನ್ನು ಮೃಷ್ಟಾನ್ನವೆಂದು ತಿನ್ನುತ್ತಾನೆ. ಅವನಿಗೆ ಆಗ ಅದು ಅಮೃತಕ್ಕೆ ಸಮಾನವಾಗಿರುತ್ತದೆ. ರಾಜ ಅಂದು ರಾತ್ರಿ ಅಲ್ಲೆ ಮಲಗಿಕೊಳ್ಳುತ್ತಾನೆ. ಬೆಳಿಗ್ಗೆ ರಾಜನ ಸೈನಿಕರು ರಾಜನನ್ನು ಹುಡುಕಿಕೊಂಡು ಅಲ್ಲಿಗೆ ಬಂದು ರಾಜನನ್ನು ಅಲ್ಲಿಂದ ಅರಮನೆಗೆ ಕರೆದುಕೊಂಡು ಹೋಗುತ್ತಾರೆ. ಅರಮನೆಗೆ ಹೋದ ನಂತರ ಒಂದು ರೀತಿಯಲ್ಲಿ ತಾನು ತಿನ್ನುತ್ತಿದ್ದ ಆಹಾರದ ಮೇಲೆ ಜುಗುಪ್ಸೆ ಬರುತ್ತದೆ.

ವಿವಿಧ ರಾಜ್ಯಗಳ ಬಾಣಸಿಗರು ಬಂದು ವಿವಿಧ ಭಕ್ಷ್ಯ ತಿನಿಸುಗಳನ್ನು ಮಾಡಿದರೂ ರಾಜನನ್ನು ಆಹಾರದಲ್ಲಿ ತೃಪ್ತಿಪಡಿಸಲು ವಿಫಲರಾದರು.

ಮಂತ್ರಿಯು ಚಿಂತಾಕ್ರಾಂತನಾಗಿ ರಾಜನನ್ನು ಆಹಾರದಲ್ಲಿ ಯಾರು ತೃಪ್ತಿ ಪಡಿಸುತ್ತಾರೋ ಅವರಿಗೆ ಸೂಕ್ತ ಬಹುಮಾನ ಕೊಡಲಾಗುತ್ತದೆ ಎಂದು ಡಂಗೂರ ಸಾರಿಸುತ್ತಾರೆ. ಆದರೆ ಯಾರ ಕೈಯಲ್ಲಿ ರಾಜನನ್ನು ಆಹಾರದಲ್ಲಿ ತೃಪ್ತಿಪಡಿಸಲು ಆಗುವುದಿಲ್ಲ. ಆಗ ಮಂತ್ರಿ ಒಂದು ಉಪಾಯ ಮಾಡಿ ಕಾಡಿನಲ್ಲಿದ್ದ ಅಜ್ಜಿಯನ್ನು ಅರಮನೆಗೆ ಕರೆಯಿಸಿ ಅಜ್ಜಿ ಕೈಯಲ್ಲಿ ಅಂದು ಮಾಡಿದ್ದ ಅಡುಗೆಯನ್ನು ಮಾಡಿಸಿ ಬಡಿಸುತ್ತಾರೆ. ಆದರೂ ರಾಜನಿಗೆ ತೃಪ್ತಿ ಆಗುವುದಿಲ್ಲ. ಆಗ ಅಜ್ಜಿ ರಾಜನನ್ನು ಕುರಿತು ಹೇಳುತ್ತಾಳೆ, ನೋಡಪ್ಪಾ ರಾಜ ಅಂದು ನೀವು ನನ್ನ ಬಳಿ ಬಂದಾಗ ಹಸಿವಿನಿಂದ ಬಳಲಿಕೆ ಆಗಿತ್ತು. ಆಗ ಏನೆ ಕೊಟ್ಟಿದ್ದರು ಅದು ನಿಮಗೆ ಅಮೃತಕ್ಕೆ ಸಮ ನಿಸುತ್ತಿತ್ತು. ಈಗ ನಿಮಗೆ ಹೊಟ್ಟೆ ತುಂಬಿದೆ ಅದಕ್ಕೇ ಏನು ರುಚಿಸುತ್ತಿಲ್ಲ ಎಂದಾಗ ರಾಜನಿಗೆ ಹಸಿವಿನ ಮಹಾತ್ಮೆ ಹಾಗೂ ಊಟದ ಮಹತ್ವವೂ ತಿಳಿಯುತ್ತದೆ. ಆಗ ರಾಜ ಸಂತೋಷದಿಂದ ಅಜ್ಜಿಯನ್ನು ಸತ್ಕರಿಸಿ ಸುಖವಾಗಿ ರಾಜ್ಯವನ್ನು ಆಳುತ್ತಾನೆ. ■

